ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)

| | | | | |
|---|---|---|---|---|
| ಹೇಳಿಕೆ ಹಾಳೆ (ಆರ್.ಪಿ ಸಂಖ್ಯೆ57) ನಮೂನೆ ಸಂಖ್ಯೆ4 (ಸಿವಿಲ್) | 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ | | | |
| | ಸಿ.ಸಿ ಸಂಖ್ಯೆ 802/2015 | | | |
| | ಸಿಡಬ್ಲೂ | **18** | ಪಿಡಬ್ಲೂ | **16** |

| | |
|---|---|
| ಸಾಕ್ಷಿಯ ಹೆಸರು | ಸಾಗರ ಶಿವಾಜಿ ಕಾಂಬಳೆ |
| ತಂದೆಯ ಹೆಸರು | ಶಿವಾಜಿ ಕಾಂಬಳೆ |
| ವಯಸ್ಸು | 37 ವರ್ಷ |
| ಉದ್ಯೋಗ | ಹಾರುಗೇರಿ |
| ವಾಸಸ್ಥಳ | ಮುಖ್ಯಪೇದೆ |

ದಿನಾಂಕ 02.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

1) 2014 ರಿಂದ 2021 ರವರೆಗೆ ನಾನು ನಿಪ್ಪಾಣಿ ಗ್ರಾಮೀಣ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2) ದಿನಾಂಕ 27-11-2014 ರಂದು ಚಾಸಾ-27 ರವರು ರಾತ್ರಿ 3-30 ಗಂಟೆಗೆ ನಾನು ಮನೆಯಲ್ಲಿದ್ದಾಗ ನನಗೆ ಫೋನ್ ಮಾಡಿ ಕೇಲವು ಜನರು ಕಳ್ಳತನ ಮಾಡಿಕೊಂಡು ಮೋಟಾರ ಸೈಕಲ್ ಮೇಲೆ ಕೊಲ್ಲಾಪೂರದ ಕಡೆಗೆ ಮಾಂಗೂರ ರಸ್ತೆಯ ಮೇಲೆ ಹೊಗುತ್ತಿದ್ದಾರೆ ಅಂತಾ ಮಾಹಿತಿ ಬಂದಿದ್ದಾಗಿ ತಿಳಿಸಿ ಹೋಗಿ ಹಿಡಿಯುವದಿದೆ ಅಂತಾ ಹೇಳಿದರು. ನಾನು ಠಾಣೆಗೆ ಹೋದೆ. ಅಲ್ಲಿ ಚಾಸಾ-27 ರವರು ಚಾಸಾ-19, 24, 20, 23, 21, 22 ರವರನ್ನು ಕರೆಯಿಸಿದ್ದರು. ನಾವು ಸರಕಾರಿ ವಾಹನದಲ್ಲಿ ಬೆಳಿಗ್ಗೆ 4-00 ಗಂಟೆಗೆ ಠಾಣೆಯಿಂದ ಹೊರಟು ನಿಪ್ಪಾಣಿ ಗ್ರಾಮೀಣ ಪೋಲಿಸ ಠಾಣೆ ಬಳಿ ಇರುವ ಆಡಿ ಕ್ರಾಸ ಬಳಿ ಹೋದೆವು ಅಲ್ಲಿ ತಲುಪಿದಾಗ ಬೆಳಿಗ್ಗೆ 5-00 ಗಂಟೆಯಾಗಿತ್ತು. ನಾವೆಲ್ಲರು ಅಲ್ಲಿ ವಾಚ್ ಮಾಡುತ್ತಾ ನಿಂತಿದ್ದೆವು. ಆಗ ಮಾಂಗೂರ ಕಡೆಯಿಂದ 3 ಮೋಟಾರ ಸೈಕಲ್ ಮೇಲೆ 6 ಜನ ಬರುತ್ತಿದ್ದರು. ಆಗ ನಾನು ಹಾಗೂ ಸಿಬ್ಬಂದಿಗಳು ಬ್ಯಾಟರಿ ಬೆಳಕನ್ನು ಬಿಟ್ಟು ಆ 6 ಜನರಿಗೆ ವಾಹನವನ್ನು ನಿಲ್ಲಿಸಲು ಹೇಳಿದೆವು. ಆಗ ಅವರು ವಾಹನಗಳನ್ನು ನಿಧಾನ ಮಾಡಿ ನಂತರ ಒಮ್ಮಲೆ ಜೋರಾಗಿ ಚಲಾಯಿಸಲು ಪ್ರಯತ್ನ ಪಟ್ಟರು ನಾವೆಲ್ಲರೂ ಅಷ್ಟರಲ್ಲಿ ಹೋಗಿ ಅವರನ್ನು ಹಿಡಿದೆವು. ಅವರ ಹೆಸರನ್ನು ವಿಚಾರಿಸಿದಾಗ. ಅವರು ತಮ್ಮ ಹೆಸರನ್ನು ಸಚೀನ ಚಂದ್ರಕಾಂತ ಸನದಿ, ರಾಜು ಮಾರುತಿ ಭಂಗೆಮಾಳಿ, ರಾಜು ಸಿದ್ದಪ್ಪಾ ದೇಸಾಯಿ, ಮಂಜುನಾಥ ಸುರೇಶ ಕಾಂಬಳೆ, ವಿಶಾಲಕುಮಾರ ದೇಸಾಯಿ, ಕಲ್ಲಪ್ಪಾ ನಿಂಗಪ್ಪಾ ಅರಗೆ ಅಂತಾ ಹೇಳಿದರು.

3) ನಾವು ಅವರ ವಾಹನಗಳನ್ನು ಹಾಗೂ ಅವರ ಬಳಿ ಇದ್ದ ಕೈ ಚೀಲವನ್ನು ಪರಿಶೀಲಿಸಲು ಮುಂದಾದಾಗ ಅವರು ಕೈ ಚೀಲವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದರು. ನಾವು ಸದರಿ ಕೈ ಚೀಲವನ್ನು ಪರಿಶೀಲನೆ ಮಾಡಿದಾಗ, ಅದರಲ್ಲಿ ಬೆಳ್ಳಿ, ಬಂಗಾರದ ಆಭರಗಳು ಹಾಗೂ ಹಿತ್ತಾಳೆಯ ವಸ್ತುಗಳು ಇದ್ದವು. ಅವುಗಳನ್ನು ಎಲ್ಲಿಂದ ತಂದಿರುವಿರಿ ಅಂತಾ ವಿಚಾರಿಸಿದಾಗ ಆರೋಪಿಗಳು ಯಾವುದೇ ಉತ್ತರ ಕೊಡಲಿಲ್ಲ. ಆಗ ಚಾಸಾ-27 ಸದರಿ 6 ಜನರು ಮೇಲೆ ಹೇಳಿದ ವಸ್ತುಗಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಬಂದಿರಬಹುದೆಂದು ಉಹಿಸಿ ಇಬ್ಬರು ಪಂಚರು ಹಾಗೂ ಒಬ್ಬ ಪತ್ತಾರ ನನ್ನು ಸಿಬ್ಬಂದಿ ಮೂಲಕ ಕರೆಯಿಸಿ ಆಭರಣ ಹಾಗೂ ವಸ್ತುಗಳನ್ನು ತೂಕ ಮಾಡಿಸಿ ಪಂಚನಾಮೆ ಮಾಡಿದರು. ಚಾಸಾ-27 ರವರು ಪಂಚನಾಮೆ ಮಾಡಿದ ಚೀಟಿಯನ್ನು ವಸ್ತುಗಳಿಗೆ ಅಂಟಿಸಿ ಪಂಚನಾಮೆ ತಯಾರಿಸಿದರು. ಸದರಿ 6 ಜನರಿಂದ ಚಾಸಾ-27 ರವರು 1 ಸ್ಪಂಡರ್ ಬೈಕ್ ಎಂ-ಎಚ್-08 ಎಂಬ ಬೈಕವನ್ನು ವಶಪಡಿಸಿಕೊಂಡರು. ಒಂದು ನಂಬರ ಪ್ಲೇಟ್ ಇಲ್ಲದ ಸಿಡಿಡಾನ್ ಬೈಕ್ ಮತ್ತೊಂದು ಸ್ಪಂಡರ್ ಬೈಕ್ ಎಂ-ಎಚ್-09 ಸಂಖ್ಯೆ ಹೊಂದಿದ್ದ ಬೈಕ್ ವಶಪಡಿಸಿಕೊಂಡರು. ಬೆಳ್ಳಿಯ ಮೂರ್ತಿ, ಬೆಳ್ಳಿಯ ಹಸ್ತ, ಬಂಗಾರದ ಗಂಟನ್, ಬಂಗಾರದ ಜುಮಕಿ, ಬಂಗಾರದ ಮಂಗಳಸೂತ್ರ, ಬೆಳ್ಳಿಯ ಗಣಪತಿ ಮೂರ್ತಿ. ಹಿತ್ತಾಳೆಯ ಒಂದು ಘಂಟೆ. ಹಿತ್ತಾಳೆಯ ರೇಣುಕಾದೇವಿಯ ಮುಖ ಮತ್ತು ಇನ್ನೂ ಹಲವು ಆಭರಗಳು ಇದ್ದವು, ಅವುಗಳೆಲ್ಲ ಈಗ ನನಗೆ ನೆನಪಿಲ್ಲ. ನಂತರ ಆ 6 ಜನರನ್ನು ಚಾಸಾ-27 ರವರನ್ನು ಠಾಣೆಗೆ ಕರೆದುಕೊಂಡು ಬಂದು ದಸ್ತಗೀರ ಮಾಡಿದರು. ನಾನು ಚಾಸಾ-27 ರವರಿಗೆ ಹೇಳಿಕೆಯನ್ನು ನೀಡಿದೆ. ಆ ದಿನ ನಾವು ಹಿಡಿದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ಪ್ರಕರಣದಲ್ಲಿನ ಆರೋಪಿ ನಂ-1 ರವನ್ನು ತೋರಿಸಿ ಆ ದಿನ ಆತನನ್ನು ತಾವು ಹಿಡಿದಿದ್ದಾಗಿ ನುಡಿಯುತ್ತಾರೆ. ಆ ದಿನ ನಾವು ಜಪ್ತು ಮಾಡಿದ ವಸ್ತುಗಳ ಒಟ್ಟು ಮೌಲ್ಯ 2 ಲಕ್ಷದ 84 ಸಾವಿರದ 900 ರೂಪಾಯಿ ಆಗಿತ್ತು.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿ ಎ ಎ ವಕೀಲರಿಂದಃ</u>

1) ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಆರೋಪಿತರು ಯಾರು ನನಗೆ ಪರಿಚಿತರಲ್ಲ. ಚಾಸಾ-27 ರವರು ನನ್ನನು ಪೋಲಿಸ ಠಾಣೆಗೆ ಕರೆಯಿಸಿದಾಗ ಆರೋಪಿಗಳ ಚಹರಾ ಪಟ್ಟಿ ಅಥವಾ ಗುರುತಿನ ಬಗ್ಗೆ ನನಗೆ ತಿಳಿಸಲಿಲ್ಲ. ಚಾಸಾ-27 ರವರು ನನಗೆ ಆರೋಪಿತರ ಪೋಟೋಗಳನ್ನು ತೋರಿಸಲಿಲ್ಲ. ಘಟನಾ ದಿನ ಎಲ್ಲ ಸಿಬ್ಬಂದಿಗಳು ರಾತ್ರಿ ಕರ್ತವ್ಯದಲ್ಲಿ ಇರಲಿಲ್ಲ. ಚಾಸಾ-19 ರಿಂದ 24 ರವರು ತಮ್ಮ ಕ್ವಾಟರ್ಸನಲ್ಲಿ ಇದ್ದರು. ಅವರುಗಳನ್ನೆಲ್ಲ ಚಾಸಾ-27 ರವರು ಪೋನ್ ಮಾಡಿ ಕರೆಯಿಸಿದರು. ನಿಪ್ಪಾಣಿ ಠಾಣೆಯಿಂದ ನಮ್ಮ ಮನೆ 50 ಅಡಿ ದೂರದಲ್ಲಿರುತ್ತದೆ. ಮನೆಯಿಂದ ಪೋಲಿಸ ಠಾಣೆಗೆ ಬರಲು 1 ನಿಮಿಷ ಸಾಕು. ಆ ದಿನ ನಾನು ತಯಾರಾಗಿ ಬರಲು 10 ನಿಮಿಷ ತೆಗೆದುಕೊಂಡೆ.

2) ಚಾಸಾ-27 ರವರು ಬೆಳಿಗ್ಗೆ 4 ಗಂಟೆಗೆ ನಾವು ಠಾಣೆಗೆ ಬಂದ ಬಗ್ಗೆ ನಮೂದು ಮಾಡಿರುತ್ತಾರೆ. ಎಲ್ಲ ಠಾಣೆಯಲ್ಲಿ ಠಾಣಾಧಿಕಾರಿ ಠಾಣಾ ಡೈರಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ನಮ್ಮ ಪೋಲಿಸ್ ಠಾಣೆಯಿಂದ ಆಡಿ ಕ್ರಾಸ್ 25 ಕಿಲೋ ಮೀಟರ್ ದೂರದಲ್ಲಿದೆ. ವಾಚ್ ಮಾಡಲು ನಾವೆಲ್ಲರೂ ಆಡಿ ಕ್ರಾಸ್ ನ ಸರ್ಕಲ್ ಬಳಿ ನಿಂತಿದ್ದೇವು. ಪಂಚರನ್ನು ಎಲ್ಲಿಂದ ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಪಂಚರಲ್ಲಿ ಒಬ್ಬ ಬೆನಾಡಿ ಮತ್ತು ಇನ್ನೊಬ್ಬ ಹಣಬರವಾಡಿ ಗ್ರಾಮದವನು. ಆಡಿ ಕ್ರಾಸನಿಂದ ಆ 2 ಗ್ರಾಮಗಳು ಸುಮಾರು 4 ಕಿಲೋ ಮೀಟರ್ ದೂರದಲ್ಲಿವೆ. ಸದರಿ 2 ಗ್ರಾಮಗಳು ಒಂದೆ ದಿಕ್ಕಿನಲ್ಲಿ ಇಲ್ಲ ಎಂದರೆ ಸರಿ. ಪಂಚರು ಸ್ಥಳೀಯ ಪಂಚರಲ್ಲ ಎಂದರೆ ಸರಿ. ಆಭರಣಗಳ ಮೌಲ್ಯವನ್ನು ನಾನು ಪತ್ತಾರರು ಹೇಳಿದ ಆಧಾರದ ಮೇಲೆ ಹೇಳಿದ್ದೇನೆ. ಪತ್ತಾರರನ್ನು ಚಾಸಾ-19 ಮತ್ತು 23 ರವರು ಕರೆದುಕೊಂಡು ಬಂದಿರುತ್ತಾರೆ. ಪತ್ತಾರ ಯಾವ ಊರಿನವನು ಎಂದು ನನಗೆ ಗೊತ್ತಿಲ್ಲ.

3) ನಾನಾಗಲೀ ಚಾಸಾ-27 ರವರಾಗಲೀ ಜಪ್ತಾದ ವಸ್ತುಗಳಿಗೆ ಸಂಬಂಧಪಟ್ಟಂತೆ ಪ್ರತೇಕವಾದ ಪಟ್ಟಿಯನ್ನು ತಯಾರಿಸಿಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಆಡಿ ಕ್ರಾಸ್ ಬಳಿ ಹಿಡಿದೆವು, ಅವರನ್ನು ತಪಾಸಣೆ ಮಾಡಿ ಅವರಿಂದ ಬೈಕ್ ಹಾಗೂ ಬೆಳ್ಳಿ, ಬಂಗಾರ ಹಾಗೂ ಹಿತ್ತಾಳೆ ಆಭರಣಗಳನ್ನು ವಶಪಡಿಕೊಂಡೆವು ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಾಗಾದಲ್ಲಿ ಪಂಚರ ಹಾಗೂ ಪತ್ತಾರನ ಸಮಕ್ಷಮ ಪಂಚನಾಮೆ ಮಾಡಿರುತ್ತೇವೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಘಟನೆಯಾಗದಿದ್ದರೂ ಸಹ ನಾನು ಹಾಗೂ ನಮ್ಮ ಮೇಲಾಧಿಕಾರಿಗಳು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).
ಓ.ಹೆ.ಕೆ.ಸರಿ ಇದೆ.

**(ಅಶೋಕ ಆರ್.ಹೆಚ್.)**
**1 ನೇ ಹೆಚ್ಚುವರಿ ಪ್ರ.ದ.ನ್ಯಾದಂ.ಗಳು ಚಿಕ್ಕೋಡಿ.**